ಶ್ರೀ ಎಚ್. ಎಂ. ಚನ್ನಬಸಪ್ಪ . -೧೩ ಮೈಲಿವರೆಗೆ ಆಗಿದೆ ಎಂದು ನಾನು ಹೇಳಿದೆ.

ಶ್ರೀ ಬಿ. ಇ ರಾಮಯ್ಯ .—ಸುಮಾರು ೧೫೭ ಮೈಲಿಗಳಷ್ಟು ಆಯಕಟ್ಟು ರಸ್ತೆಗಳು ಎಂದು ಹೇಳಿದ್ದೀರಿ. ಈ ರಸ್ತೆಗಳು ಮೋಟಾರ್ ಓಡಾಡುವುದಕ್ಕೆ ಯೋಗ್ಯವಾಗಿವೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಅದು ಮೋಟಾರ್ ಓಡುವುದರ ಮೇಲೆ ಅವಲಂಬಿಸಿದೆ.

ಶ್ರೀ ಎಂ. ಮಲ್ಲಪ್ಪ .—ಪ್ರತಿ ವರ್ಷದಲ್ಲಿ ಪ್ರತಿ ತಾಲ್ಲೂಕ್‌ನಲ್ಲಿಯೂ ರಸ್ತೆಗಳಿಗೆ ಇಷ್ಟು ಮೈಲಿ ರಸ್ತೆಗಳಿಗೆ ಟಾರ್ ಹಾಕಬೇಕು ಎನ್ನುವ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಟಾರ್ ಹಾಕುವುದಕ್ಕೆ ಯಾವಾಗ ಪ್ರಾಶಸ್ತ್ಯ ಬರುತ್ತದೆ ಎಂದರೆ ಬಾಕಿ ರಸ್ತೆಗಳೆಲ್ಲಾ ಸಮರ್ಪಕವಾದಾಗ. ಎಲ್ಲಾ ರಸ್ತೆಗಳಿಗೂ ಟಾರ್ ಹಾಕಿಯಾದ ಮೇಲೆ ಸಿಮೆಂಟ್ ಹಾಕುವ ವಿಚಾರ ಬರುತ್ತದೆ.

SRI H. LINGA REDDY .—Bellary to Gokak *via* Kurnool there are two bridges to be constructed. May I know whether construction work of these bridges would be included in this years budget ?

ಶ್ರೀ ಎಚ್ ಎಂ. ಚನ್ನಬಸಪ್ಪ .—ಮಾನ್ಯ ಸದಸ್ಯರು ಹೇಳತಕ್ಕಂಥ ಬ್ರಿಡ್ಜ್‌ಸ್‌ಗಳು ಆಗಬೇಕು ಎಂಬುದನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ. ಆ ಬಗ್ಗೆ ಅಂದಾಜುಗಳನ್ನು ತಯಾರು ಮಾಡಿಸಿ ಇಟ್ಟುಕೊಂಡು ಹಣ ದೊರಕಿದಾಗ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಂ. ಸತ್ಯನಾರಾಯಣಸಿಂಗ್ .— ಆಯಕಟ್ಟು ರಸ್ತೆಗಳು ಈಗ ಬಹಳ ದುರವಸೆಯಲ್ಲಿರುವುದರಿಂದ ರೈತರಿಗೆ ಅನುಕೂಲವಾಗುತ್ತಿಲ್ಲ. ಆದ್ದರಿಂದ ಈ ಆಯಕಟ್ಟು ರಸ್ತೆಗಳನ್ನು ರಿಪೇರಿ ಮಾಡಿಸಲು ವಿಶೇಷ ಗ್ರಾಂಟ್ ಏನಾದರೂ ಕೊಡುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ .—ಎಲ್ಲ ರಸ್ತೆಗಳು ನಾ ದುರಸ್ತಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ರಸ್ತೆಗಳು ಆಗಿರಬಹುದು. ಅವುಗಳನ್ನು ದುರಸ್ತಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

SCHEME TO CONSTRUCT HIGH LEVEL BARRAGE ACROSS VARADA RIVER NEAR BANAWASI

361. SRI F. S. TAVARE (Haveri) .— Will the Minister of State for Major Irrigation be pleased to state :—

(*a*) Whether it is a fact that experts have prepared scheme to construct a high level barrage across Varada River near Banawasi and also barrages each at distance of 3 to 4 miles so as to store the water during the rainy season and release the same to the river in summer ;

(*b*) if so when the Government would take up this scheme ?

SRI H.N. NANJE GOWDA (Minister of State for Major Irrigation).-

(*a*) No.

(*b*) The question does not arise.

ಶ್ರೀ ಎಫ್. ಎಸ್. ತಾವರೆ .—ವರದಾನದಿಯ ಪ್ರವಾಹವನ್ನು ತಡೆಗಟ್ಟಲು ಬನವಾಸಿ ಬಳಿ ವರದಾನದಿಗೆ ಒಂದು ಅಡ್ಡಲಾಗಿ ಮೇಲ್ಮಟ್ಟದ ಅಡ್ಡಕಟ್ಟೆಯನ್ನು ಕಟ್ಟಿಸಿದಂತೆ ಸಲುವಾಗಿ ಸರ್ವೆ ನಡೆಸಿರುವ ಸಂಗತಿ ಸರ್ಕಾರಕ್ಕೆ ಗೊತ್ತಿದೆಯೇ ಹೇಗೆ ?

ಶ್ರೀ ಎಚ್. ಎನ್. ನಂಜೇಗೌಡ .—ಮಾನ್ಯ ಸದಸ್ಯರು ಕೇಳಿರತಕ್ಕಂಥ ಸ್ಥಳದಲ್ಲಿ ಅಲ್ಲ. ಆದರೆ ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕ್, ಕಾನ್ಲೆ ಬಳಿ ಒಂದು ಪ್ರಾಜೆಕ್ಟ್ ಮಾಡಬೇಕೆಂದು ಕೇಂದ್ರ ಸರ್ಕಾರದವರಿಂದ ಕ್ಲಿಯರೆನ್ಸ್ ಕೇಳಿದ್ದೇನೆ.

ಶ್ರೀ ಎಫ್. ಎಸ್. ತಾವರೆ .— ಬೇಸಿಗೆಯಲ್ಲಿ ನೀರೆಲ್ಲಾ ಒಣಗಿಹೋಗಿ ಜನರು ತೊಂದರೆ ಪಡುವುದು ಒಂದು ರೀತಿಯಾದರೆ, ಮಳೆಗಾಲದಲ್ಲಿ ಪ್ರವಾಹ ಬಂದು ಜನರು ತೊಂದರೆ ಅನುಭವಿಸುವುದು ಇನ್ನೊಂದು ರೀತಿಯದಾಗಿದೆ. ಇದನ್ನು ತಡೆಗಟ್ಟುವುದಕ್ಕೆ ವರದಾನದಿಗೆ ಅಡ್ಡಲಾಗಿ ಒಂದು ಮೇಲ್ಕಟ್ಟೆಯ ಅಡ್ಡಕಟ್ಟೆಯನ್ನು ನಿರ್ಮಾಣ ಮಾಡತಕ್ಕಂಥ ಯೋಜನೆಯನ್ನು ಜಾಗ್ರತೆ ಕಾರ್ಯಗತ ಮಾಡುತ್ತೀರಾ ?

SRI H. N. NANJE GOWDA .— That we will consider.

CLOTH PRODUCED BY POWERLOOMS OWNERS

436. SRI P. M. BANGI (Jamkhandi).—Will the Minister for Industries be pleased to state .—

(*a*) whether the licences for all powerlooms in Bijapur District are issued on the condition that only white cloths should be produced on power looms ;

(*b*) whether the Government is aware that about 1,300 powerlooms owned by Master Weavers and Co-operative ocieties in Jamkhandi Taluk are producing coloured sarees and are thus contravening the order No. CER/10/66 dated 9th November 1966 issued by Textile Commissioner under Essential Commodities Act, 1955 ;

(*c*) the reasons for not talking penal or other action against the powerloom owners and the office bearers of those Societies for contravening the orders Government ?

SRI S M. KRISHNA (Minister for Industries) .—

(*a*) No; The restriction is that coloured sarees should not be manufactured on powerlooms.

(*b*) Yes.

(*c*) Instructions have been issued to the Officers concerned to take effective steps to prohibit if necessary by invoking the provisions of penal action under law.

ಶ್ರೀ ಪಿ. ಎಂ. ಬಾಂಗಿ .—(೩)ಗೆ ಉತ್ತರವಾಗಿ ಉತ್ತರ ಕೊಡುತ್ತಾ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಹೇಳಿದ್ದೀರಿ ; ಯಾವ ಯಾವ ಅಧಿಕಾರಿಗಳಿಗೆ ಸೂಚನೆಗಳನ್ನು ಕಳುಹಿಸಿದ್ದೀರಿ, ಯಾವಾಗ ಕಳುಹಿಸಿದ್ದೀರಿ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಇದುವರೆಗೆ ಕ್ರಮ ಏತಕ್ಕೆ ಕೈಗೊಂಡಿಲ್ಲ ಎಂದು ಕೇಳಬಯಸುತ್ತೇನೆ ?

ಶ್ರೀ ಎಸ್. ಎಂ. ಕೃಷ್ಣ .—ಟೆಕ್ಸ್‌ಟೈಲ್ ಕಮೀಷನರ್ ಅವರ ಆಜ್ಞೆ ಏನಿದೆ ಅದನ್ನು ಜಾರಿಗೆ ತರಬೇಕು ಎಂಬ ನಿರ್ದೇಶನವನ್ನು ಬಿಜಾಪುರ ಜಿಲ್ಲಾಧಿಕಾರಿಯವರಿಗೆ ತಾ. ೧೭-೪-೧೯೭೨ ರಂದು ಕಳುಹಿಸಿಕೊಟ್ಟಿದ್ದೇವೆ.